**All India Radio: Bangalore**
**National Bulletin In Kannada**
**19.05.2025  07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

- ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಇಂದಿನಿಂದ ಪ್ರವಾಸ
- ವಿದೇಶಿ ಹೂಡಿಕೆದಾರರಿಂದ ಭಾರತೀಯ ಷೇರು ಮಾರುಕಟ್ಟೆಗೆ ಸುಮಾರು ೧೮ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹೂಡಿಕೆ
- ಮುಂದಿನ ೫ ದಿನಗಳಲ್ಲಿ ಕರ್ನಾಟಕ ಸೇರಿದಂತೆ ಪಶ್ಚಿಮ ಕರಾವಳಿ ರಾಜ್ಯಗಳಲ್ಲಿ ಭಾರೀ ಮಳೆ - ಹವಾಮಾನ ಇಲಾಖೆ ಮುನ್ಸೂಚನೆ
- ಐಪಿಎಲ್ ಟಿ-೨೦ ಕ್ರಿಕೆಟ್ ; ಪ್ಲೇ-ಆಫ್ ಹಂತ ತಲುಪಿದ ಗುಜರಾತ್, ಬೆಂಗಳೂರು ಮತ್ತು ಪಂಜಾಬ್ ತಂಡಗಳು

<><><><>

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಆರು ದಿನಗಳ ಕಾಲ ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಮೂರು ದೇಶಗಳ ನಾಯಕರನ್ನು ಜೈಶಂಕರ್ ಭೇಟಿ ಮಾಡಲಿದ್ದಾರೆ. ಈ ಭೇಟಿಯ ಸಮಯದಲ್ಲಿ ದ್ವಿಪಕ್ಷೀಯ ಸಂಬಂಧ, ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಅವರು ಚರ್ಚಿಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯ ತಿಳಿಸಿದೆ.

<><><><>

ಜಾಗತಿಕ ಸಕಾರಾತ್ಮಕ ಸೂಚನೆಗಳು ಮತ್ತು ದೇಶೀಯ ಆರ್ಥಿಕ ಪರಿಸ್ಥಿತಿಗಳು ಸುಧಾರಿಸುತ್ತಿರುವ ಹಿನ್ನೆಲೆಯಲ್ಲಿ ಮೇ ತಿಂಗಳಿನಲ್ಲಿ ವಿದೇಶಿ ಹೂಡಿಕೆದಾರರು ಭಾರತೀಯ ಷೇರು ಮಾರುಕಟ್ಟೆಗೆ ೧೮ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಹೂಡಿಕೆ ಮಾಡಿದ್ದಾರೆ.

ಠೇವಣಿಗಳ ದತ್ತಾಂಶದ ಪ್ರಕಾರ, ವಿದೇಶಿ ಬಂಡವಾಳ ಹೂಡಿಕೆದಾರರು ಅಥವಾ ಎಫ್‌ಪಿಐಗಳು ಷೇರು ಮಾರುಕಟ್ಟೆಯಲ್ಲಿ ೧೮ ಸಾವಿರದ ೬೨೦ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದ್ದಾರೆ ಆದರೆ ಮೇ ತಿಂಗಳಲ್ಲಿ ಇದುವರೆಗೆ ಸಾಲ ಮಾರುಕಟ್ಟೆಗಳಿಂದ ೬ ಸಾವಿರದ ೭೪೮ ಕೋಟಿ ರೂಪಾಯಿಗಳನ್ನು ಹಿಂತೆಗೆದುಕೊಂಡಿದ್ದಾರೆ. ಮೂರು ತಿಂಗಳ ನಿರಂತರ ಹೊರಹರಿವಿನ ನಂತರ ಏಪ್ರಿಲ್‌ನಲ್ಲಿ ೪ ಸಾವಿರದ ೨೨೩ ಕೋಟಿ ರೂಪಾಯಿ ನಿವ್ವಳ ಹೂಡಿಕೆಯ ನಂತರ ಷೇರುಗಳು ಸಕಾರಾತ್ಮಕವಾಗಿವೆ. ಇದಕ್ಕೂ ಮೊದಲು, ಹೂಡಿಕೆದಾರರು, ಮಾರ್ಚ್‌ನಲ್ಲಿ ೩ ಸಾವಿರದ ೯೭೩ ಕೋಟಿ ರೂಪಾಯಿ, ಫೆಬ್ರವರಿಯಲ್ಲಿ ೩೪ ಸಾವಿರದ ೫೭೪ ಕೋಟಿ ರೂಪಾಯಿ ಮತ್ತು ಜನವರಿಯಲ್ಲಿ ೭೮ ಸಾವಿರದ ೦೨೭ ಕೋಟಿ ರೂಪಾಯಿಗಳನ್ನು ಹಿಂತೆಗೆದುಕೊಂಡಿದ್ದರು.

<><><><>

ಸಿಂಧೂರ ಕಾರ್ಯಾಚರಣೆಯು ಭಾರತದ ರಕ್ಷಣಾ ಸಿದ್ಧಾಂತದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದ್ದು ಮೂರು ಸೇನೆಗಳ ಶಕ್ತಿ, ಕಾರ್ಯತಂತ್ರದ ಆಳ ಮತ್ತು ತಾಂತ್ರಿಕ ಪ್ರಾಬಲ್ಯವನ್ನು ಪ್ರದರ್ಶಿಸುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪ್ರಾರಂಭಿಸಲಾದ ಸಿಂಧೂರ ಕಾರ್ಯಾಚರಣೆ, ನಿಖರತೆ, ವೃತ್ತಿಪರತೆ ಮತ್ತು ಉದ್ದೇಶದಿಂದ ಮಾಪನಾಂಕ ನಿರ್ಣಯಿಸಿದ, ಮೂರು-ಸೇನೆಗಳ ಪ್ರತಿಕ್ರಿಯೆಯನ್ನು ಪ್ರದರ್ಶಿಸಿತು. ಗಡಿ ನಿಯಂತ್ರಣ ರೇಖೆಯಾದ್ಯಂತ ಮತ್ತು ಪಾಕಿಸ್ತಾನದೊಳಗೆ ಆಳವಾಗಿ ಭಯೋತ್ಪಾದಕ ಮೂಲಸೌಕರ್ಯವನ್ನು ಧ್ವಂಸಗೊಳಿಸಲು ಆಪರೇಷನ್ ಸಿಂದೂರ್ ಅನ್ನು ಶಿಕ್ಷಾರ್ಹ ಮತ್ತು ಗುರಿಯಿಟ್ಟುಕೊಂಡ ಅಭಿಯಾನವಾಗಿ ಕಲ್ಪಿಸಲಾಗಿತ್ತು. ದಾಳಿಗೆ ಭಾರತದ ಪ್ರತೀಕಾರದ ಕ್ರಮ ನಿಖರವಾದ ಯೋಜನೆ ಮತ್ತು ಗುಪ್ತಚರ ನೇತೃತ್ವದ ವಿಧಾನವನ್ನು ಆಧರಿಸಿದೆ, ಇದು ಕಾರ್ಯಾಚರಣೆಗಳನ್ನು ಕನಿಷ್ಠ ಮೇಲಾಧಾರ ಹಾನಿಯೊಂದಿಗೆ ನಡೆಸಲಾಗಿದೆ ಎಂದು ಖಚಿತಪಡಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

<><><><>

ಜಮ್ಮು ಮತ್ತು ಕಾಶ್ಮೀರದಲ್ಲಿ, ಆಪರೇಷನ್ ಸಿಂಧೂರ್‌ನ ಅದ್ಭುತ ಯಶಸ್ಸನ್ನು ಆಚರಿಸಲು ನಡೆದ ಅದ್ಭುತ ತಿರಂಗಾ ಯಾತ್ರೆಗಾಗಿ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ರಿಯಾಸಿ ಪಟ್ಟಣ ನಿನ್ನೆ ದೇಶಭಕ್ತಿಯ ಅಲೆಯಲ್ಲಿ ಮುಳುಗಿತ್ತು.

"ಭಾರತದ ವೈಭವದ ಯಾತ್ರೆ"ಯ ಭಾಗವಾಗಿ ಆಯೋಜಿಸಲಾದ ಈ ಯಾತ್ರೆಯು ಭಾರತೀಯ ಸಶಸ್ತ್ರ ಪಡೆಗಳ ಧೈರ್ಯಕ್ಕೆ ಗೌರವ ಸಲ್ಲಿಸಿ, ರಾಷ್ಟ್ರದ ಏಕತೆ ಮತ್ತು ಚೈತನ್ಯವನ್ನು ಎತ್ತಿ ತೋರಿಸಿತು. ಬಿಜೆಪಿ ನಿನ್ನೆ ರಾಷ್ಟ್ರ ರಾಜಧಾನಿಯ ವಿವಿಧ ಭಾಗಗಳಲ್ಲಿ ತಿರಂಗಾ ಯಾತ್ರೆಗಳನ್ನು ನಡೆಸಿತು, ಆಪರೇಷನ್ ಸಿಂಧೂರ್‌ನ ಯಶಸ್ಸನ್ನು ಆಚರಿಸುತ್ತಾ ನವದೆಹಲಿ, ಜನಕಪುರಿ, ನಜಾಫ್‌ಗಢ, ಮಟಿಯಾಲ ಮತ್ತು ದ್ವಾರಕಾ ಸೇರಿದಂತೆ ನಗರದಾದ್ಯಂತ ಯಾತ್ರೆಗಳನ್ನು ನಡೆಸಲಾಯಿತು. ಆರ್ ಕೆ ಪುರಂನಲ್ಲಿ ನಡೆದ ಯಾತ್ರೆಯನ್ನುದ್ದೇಶಿಸಿ ಮಾತನಾಡಿದ ನವದೆಹಲಿ ಸಂಸದೆ ಬನ್ಸುರಿ ಸ್ವರಾಜ್, ಆಪರೇಷನ್ ಸಿಂಧೂರ್‌ಗೆ ಪ್ರದರ್ಶಿಸಲು ಮುಂದೆ ಬಂದ ಮಹಿಳೆಯರಿಂದ ಯಾತ್ರೆಗೆ ಭಾರಿ ಬೆಂಬಲ ದೊರೆತಿದೆ ಎಂದು ಹೇಳಿದರು.

ಧ್ವನಿ : ಬನ್ಸುರಿ ಸ್ವರಾಜ್, ಸಂಸದೆ (೨೪ ಸೆಕೆಂಡುಗಳು)

<><><><>

ಮುಂದಿನ ೫ ದಿನಗಳಲ್ಲಿ ಕರ್ನಾಟಕ, ಕೊಂಕಣ, ಗೋವಾ, ಕೇರಳದಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂದಿನ ೫ ರಿಂದ ೬ ದಿನಗಳಲ್ಲಿ ಈಶಾನ್ಯ ಭಾರತ, ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂನಲ್ಲಿ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಈ ಕುರಿತು ಒಂದು ವರದಿ

ಇಂದಿನಿಂದ ಈ ತಿಂಗಳ ೨೨ ರವರೆಗೆ ಪಶ್ಚಿಮ ರಾಜಸ್ಥಾನದಲ್ಲಿ ಉಷ್ಣ ಅಲೆಯ ಪರಿಸ್ಥಿತಿ ಇರುವ ಸಾಧ್ಯತೆ ಇದ್ದು, ಒಡಿಶಾದಲ್ಲಿ ಇಂದು, ಬಿಸಿ ಮತ್ತು ಆರ್ದ್ರ ವಾತಾವರಣ ಇರುವ ಸಾಧ್ಯತೆ ಇದೆ. ಜಮ್ಮು-ಕಾಶ್ಮೀರ-ಲಡಾಖ್-ಗಿಲ್ಗಿಟ್-ಬಾಲ್ಟಿಸ್ತಾನ್-ಮುಜಫರಾಬಾದ್ ಹಾಗೂ ಹಿಮಾಚಲ ಪ್ರದೇಶದಲ್ಲಿ ನಾಳೆಯವರೆಗೆ ಗುಡುಗು ಸಹಿತ, ಬಿರುಗಾಳಿಯೊಂದಿಗೆ ಚದುರಿದ, ಹಗುರವಾದ ಮತ್ತು ಮಧ್ಯಮ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ಇದೇ ೨೪ ರವರೆಗೆ ಉತ್ತರಾಖಂಡದಲ್ಲಿಯೂ ಚದುರಿದ, ಹಗುರವಾದ ಮತ್ತು ಮಧ್ಯಮ ಮಳೆಯಾಗುವ ಸಾಧ್ಯತೆ ಇದೆ.

ಮುಂದಿನ ೨ ರಿಂದ ೩ ದಿನಗಳಲ್ಲಿ, ದಕ್ಷಿಣ ಅರೇಬಿಯನ್ ಸಮುದ್ರದ ಕೆಲವು ಭಾಗಗಳು, ಮಾಲ್ಡೀವ್ಸ್ ಮತ್ತು ಕೊಮೊರಿನ್ ಪ್ರದೇಶದ ಕೆಲವು ಭಾಗಗಳು, ದಕ್ಷಿಣ ಬಂಗಾಳ ಕೊಲ್ಲಿಯ ಕೆಲವು ಭಾಗಗಳು ಮತ್ತು ಮಧ್ಯ ಮತ್ತು ಈಶಾನ್ಯ ಬಂಗಾಳ ಕೊಲ್ಲಿಯ ಕೆಲವು ಭಾಗಗಳಲ್ಲಿ ನೈಋತ್ಯ ಮಾನ್ಸೂನ್ ಮತ್ತಷ್ಟು ಮುನ್ನಡೆಯಲು ಪರಿಸ್ಥಿತಿಗಳು ಅನುಕೂಲಕರವಾಗಿವೆ ಎಂದು ಎಂದು ಹವಾಮಾನ ಇಲಾಖೆ ತಿಳಿಸಿದೆ.

<><><><>

ಮಹಾರಾಷ್ಟ್ರದ ಸೋಲಾಪುರದ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಮೃತಪಟ್ಟವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ. ಬೆಂಕಿ ಅವಘಡದಲ್ಲಿ ಹಲವರು ಸಾವನ್ನಪ್ಪಿದ ಸುದ್ದಿ ಅತ್ಯಂತ ನೋವು ತಂದಿದೆ ಎಂದು ರಾಷ್ಟ್ರಪತಿ, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಮೃತರ ಕುಟುಂಬಗಳಿಗೆ ತೀವ್ರ ಸಂತಾಪ ಸೂಚಿಸಿರುವ ಅವರು, ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ. ಪ್ರಧಾನಿ ನರೇಂದ್ರಮೋದಿ ಅವರು, ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ೨ ಲಕ್ಷ ರೂಪಾಯಿ ಹಾಗೂ ಗಾಯಾಳುಗಳಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಗಾಯಾಳುಗಳು ಬೇಗ ಚೇತರಿಸಿಕೊಳ್ಳಲೆಂದು ಪ್ರಧಾನಿ ಹಾರೈಸಿದ್ದಾರೆ.

<><><><>

ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಮಾಧ್ಯಮ ಘಟಕಗಳ ಕಾರ್ಯನಿರ್ವಹಣೆಯನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ನಿನ್ನೆ ಬೆಂಗಳೂರಿನಲ್ಲಿ ಪರಿಶೀಲಿಸಿದರು. ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು ಕಾರ್ಯ ಚಟುವಟಿಕೆಗಳ ಕುರಿತು ವಿವರಗಳನ್ನು ಪಡೆದರು. ದೂರದರ್ಶನದ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಸಾರ್ವಜನಿಕ ಪ್ರಸಾರಕರಿಂದ ಪ್ರಸಾರವಾಗುವ ವಿವಿಧ ಕಾರ್ಯಕ್ರಮಗಳ ಕುರಿತು ವಿವರಗಳನ್ನು ಅವರು ಪಡೆದರು. ಸಚಿವರು 'ಏಕ್ ಪೆಡ್ ಮಾ ಕೆ ನಾಮ್' ಕಾರ್ಯಕ್ರಮದಡಿ ದೂರದರ್ಶನ ಕೇಂದ್ರ ಆವರಣದಲ್ಲಿ ಸಸಿ ನೆಟ್ಟರು.

<><><><>

ಪಿಎಸ್‌ಎಲ್‌ವಿ ರಾಕೆಟ್ ಭೂ ವೀಕ್ಷಣಾ ಉಪಗ್ರಹ ಇಒಎಸ್-೦೯ ಅನ್ನು ತನ್ನ ಉದ್ದೇಶಿತ ಕಕ್ಷೆಗೆ ಸೇರಿಸಲು ವಿಫಲವಾದ ಹಿನ್ನೆಲೆಯಲ್ಲಿ ಇದರ ತನಿಖೆಗಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ಒಂದು ಸಮಿತಿ ರಚಿಸಿದೆ. ರಾಕೆಟ್ ವಿಫಲದ ಕಾರಣಗಳನ್ನು ಗುರುತಿಸಲು ಸಮಿತಿ ನಿನ್ನೆ ಹಲವಾರು ಸುತ್ತಿನ ಚರ್ಚೆಗಳನ್ನು ನಡೆಸಿದೆ ಎಂದು ಇಸ್ರೋ ಅಧ್ಯಕ್ಷ ವಿ ನಾರಾಯಣನ್ ತಿಳಿಸಿದ್ದಾರೆ.

<><><><>

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡ, ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ೧೦ ವಿಕೆಟ್‌ಗಳಿಂದ ಸೋಲಿಸಿದೆ. ೨೦೦ ರನ್‌ಗಳ ಗುರಿ ಬೆನ್ನಟ್ಟಿದ ಗುಜರಾತ್‌ನ ಆರಂಭಿಕ ಜೋಡಿ ಸಾಯಿ ಸುದರ್ಶನ್ ಮತ್ತು ನಾಯಕ ಶುಭ್‌ಮನ್ ಗಿಲ್ ಅಜೇಯರಾಗಿ ಉಳಿದು, ಅನಾಯಾಸವಾಗಿ ಜಯಗಳಿಸಿದರು. ಸುದರ್ಶನ್ ಅವರ ಅದ್ಭುತ ಶತಕ ಮತ್ತು ಗಿಲ್ ಅವರ ೫೩ ಎಸೆತಗಳಲ್ಲಿ ೯೩ ರನ್‌ಗಳ ಸಮಂಜಸವಾದ ಬ್ಯಾಟಿಂಗ್ ಗುಜರಾತ್ ತಂಡವನ್ನು ಗೆಲುವಿನ ಗಡಿ ಮುಟ್ಟಿಸಿತು. ಸುದರ್ಶನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್, ನಿಗದಿತ ೨೦ ಓವರ್‌ಗಳಲ್ಲಿ ೩ ವಿಕೆಟ್‌ನಷ್ಟಕ್ಕೆ ೧೯೯ ರನ್ ಗಳಿಸಿತು, ಕೆ.ಎಲ್. ರಾಹುಲ್ ಅವರ ಅಜೇಯ ಶತಕ ತಂಡದ ಈ ಮೊತ್ತಕ್ಕೆ ನೆರವಾಯಿತು. ಈ ಗೆಲುವಿನೊಂದಿಗೆ, ಗುಜರಾತ್ ಟೈಟಾನ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವುದರೊಂದಿಗೆ ಪ್ಲೇಆಫ್‌ಗೆ ಅರ್ಹತೆ ಪಡೆಯಿತು. ಇದಲ್ಲದೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಕೂಡ ಪ್ಲೇಆಫ್ ಹಂತಕ್ಕೆ ತಲುಪಿವೆ. ೪ ನೇ ಸ್ಥಾನಕ್ಕಾಗಿ ಹೋರಾಟ ಮುಂದುವರೆದಿದೆ. ಇದಕ್ಕೂ ಮುನ್ನ ಜೈಪುರದ ಸವಾಯಿ ಮಾನ್ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ಪಂಜಾಬ್ ಕಿಂಗ್ಸ್ ತಂಡ, ರಾಜಸ್ಥಾನ್ ರಾಯಲ್ಸ್ ತಂಡವನ್ನು ಹತ್ತು ರನ್‌ಗಳಿಂದ ಸೋಲಿಸಿತು. ಪಂಜಾಬ್ ಕಿಂಗ್ಸ್ ಒಡ್ಡಿದ್ದ ೨೨೦ ರನ್‌ಗಳ ಗುರಿ ಬೆನ್ನಟ್ಟಿದ ರಾಜಸ್ಥಾನ್ ರಾಯಲ್ಸ್ ತಂಡ, ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್‌ಗಳಿಗೆ ೨೦೯ ರನ್ ಗಳಿಸಿತು.

ರಾಜಸ್ಥಾನ್ ರಾಯಲ್ಸ್ ಪರ ಧ್ರುವ್ ಜುರೆಲ್ ೫೨ ರನ್‌ಗಳ ಅತಿ ಹೆಚ್ಚು ರನ್ ಗಳಿಸಿದರು. ಲಕ್ನೋದ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡ, ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>